**1 ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ನ್ಯಾಯಾಲಯ,**
**ಪಾಂಡವಪುರ.**

ಪ್ರಸ್ತುತ: **ಶ್ರೀಮತಿ. ಪಾರ್ವತಮ್ಮ.ಬಿ.,**
ಬಿ.ಎ., ಎಲ್.ಎಲ್.ಎಂ.
**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ನ್ಯಾಯಾಲಯ, ಪಾಂಡವಪುರ.**

ದಿನಾಂಕ: 25 ನೇ ಸೆಪ್ಟೆಂಬರ್ - 2025

**ಅಸಲು ದಾವಾ ಸಂಖ್ಯೆ 94/2023**

**ವಾದಿ** : ಶ್ರೀಮತಿ. ತೇಜಾಮಣಿ

ಃ **ವಿರುದ್ಧ** ಃ

**ಪ್ರತಿವಾದಿಗಳು** : ಶ್ರೀ. ಮಹಾದೇವು

**ಮಧ್ಯಂತರ ಅರ್ಜಿ ನಂ-II**

**ಅರ್ಜಿದಾರರು** : ಶ್ರೀ.ಮಹಾದೇವು

ಃ **ವಿರುದ್ಧ** ಃ

**ಎದುರುದಾರರು** : ಶ್ರೀಮತಿ. ತೇಜಾಮಣಿ

| | |
|---|---|
| 1. Provision under which the application is filed | U/o 6 Rule 17 R/W/Sec.151 of CPC |
| 2. Relief sought for | Amendment of Written Statement |
| 3.The date on which the application is filed | 29-08-2025 |
| 4. Number of the application | IA.No.II |

| | |
|---|---|
| 5. The date on which the objections are filed by different opponents | 04-09-2025 |
| 6. The date on which the orders were passed on the said application | 25-09-2025 |

**(ಪಾರ್ವತಮ್ಮ.ಬಿ)**
**C/C 1 ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ ನ್ಯಾಯಾಲಯ, ಪಾಂಡವಪುರ.**

**ಮಧ್ಯಂತರ ಅರ್ಜಿ ನಂ-II ರ ಮೇಲೆ ಆದೇಶ**

ಪ್ರತಿವಾದಿಯು, ಸಿವಿಲ್ ಪ್ರಕ್ರಿಯಾ ಸಂಹಿತೆ, ಕ್ರಮಾದೇಶ-6 ನಿಯಮ-17 ರ ಸಹವಾಚಕ ಕಲಂ.151 ರ ಅಡಿಯಲ್ಲಿ ಮಧ್ಯಂತರ ಅರ್ಜಿಯನ್ನು ಸಲ್ಲಿಸಿ, ಪ್ರಸ್ತುತ ದಾವೆಯ ಪ್ರತಿವಾದ ಪತ್ರವನ್ನು ತಿದ್ದುಪಡಿ ಮಾಡಲು ಅವಕಾಶ ಕಲ್ಪಿಸಿ ಕೊಡಬೇಕೆಂದು ಕೋರಿಕೊಂಡಿರುತ್ತಾರೆ.

**2.** ಮಧ್ಯಂತರ ಅರ್ಜಿ ನಂ.2 ರ ಪ್ರಮಾಣ ಪತ್ರವನ್ನು ಪರಿಶೀಲಿಸಲಾಯಿತು.

**3.** ವಾದಿಯು ಸದರಿ ಪ್ರತಿವಾದಿಯ ಮಧ್ಯಂತರ ಅರ್ಜಿಗೆ ತಕರಾರನ್ನು ಸಲ್ಲಿಸಿರುತ್ತಾರೆ. ಮಧ್ಯಂತರ ಅರ್ಜಿ ನಂ.2 ಕ್ಕೆ ಸಲ್ಲಿಸಿರುವ ತಕರಾರನ್ನು ಪರಿಶೀಲಿಸಲಾಯಿತು.

**4.** ಪ್ರತಿವಾದಿಯ ಅರ್ಜಿ ಮತ್ತು ವಾದಿಯ ತಕರಾರಿನ ಮೇಲೆ ಈ ಕೆಳಗಿನ ಅಂಶಗಳು ನಿರ್ಣಯಕ್ಕೆ ಉದ್ಭವಿಸಿರುತ್ತದೆ.

**5.** ಪ್ರತಿವಾದಿಯ ಅರ್ಜಿ, ಪ್ರಮಾಣಪತ್ರ, ವಾದಿಯ ತಕರಾರು ಮತ್ತು ಹಾಜರುಪಡಿಸಿದ ದಾಖಲಾತಿಗಳನ್ನು ಕೂಲಂಕುಷವಾಗಿ ಪರಿಶೀಲಿಸಿದ ನಂತರ, ಈ ಕೆಳಗಿನ ಅಂಶಗಳು ನ್ಯಾಯಾಲಯದ ಪರಿಗಣನೆಗೆ ಉದ್ಭವವಾಗಿರುತ್ತವೆ.

**<u>ಅಂಶ</u>**

1. ಪ್ರತಿವಾದಿಯ ಮಧ್ಯಂತರ ಅರ್ಜಿಯನ್ನು ಪುರಸ್ಕರಿಸಲು ಕಾರಣಗಳನ್ನು ತೋರಿಸಲ್ಪಡುವರೇ?

2. ಆದೇಶವೇನು?

**6.** ಪ್ರತಿವಾದಿ ಮತ್ತು ವಾದಿಯು ಮಾನ್ಯ ವಕೀಲರ ವಾದ ಆಲಿಸಿ, ಉಭಯಪಕ್ಷಗಾರರು ಹಾಜರುಪಡಿಸಿದ ದಾಖಲಾತಿಗಳನ್ನು ಪರಿಶೀಲಿಸಿದ ನಂತರ ಈ ಮೇಲಿನ ಅಂಶಗಳಿಗೆ ಈ ಕೆಳಗಿನಂತೆ ಉತ್ತರಿಸಿರುತ್ತೇನೆ.

ಅಂಶ ನಂ.**1**ಃ ಸಕಾರಾತ್ಮಕವಾಗಿ
ಅಂಶ ನಂ.**2**ಃ ಅಂತಿಮ ಆದೇಶದಂತೆ ಈ ಕೆಳಕಂಡಃ

**<u>ಕಾರಣಗಳು</u>**

**7.** **<u>ಅಂಶ-1ಃ-</u>** ಪ್ರತಿವಾದಿಯು ಪ್ರತಿವಾದ ಪತ್ರವನ್ನು ತಿದ್ದುಪಡಿ ಮಾಡಿ, ಖಂಡಿಕೆ-11(ಎ) ಅನ್ನು ಸೇರಿಸಿಕೊಳ್ಳಲು ಪ್ರಸ್ತುತ ಅರ್ಜಿಯನ್ನು ಸಲ್ಲಿಸಿರುತ್ತಾರೆ. ವಾದಿ ಪ್ರತಿವಾದಿಯ ವಿರುದ್ಧ ಶಾಶ್ವತ ನಿರ್ಭಂಧಕಾಜ್ಞೆ ಆದೇಶವನ್ನು ಕೋರಿ ಪ್ರಸ್ತುತ ದಾವೆಯನ್ನು ದಿನಾಂಕ: 17-03-2023 ರಂದು ಸಲ್ಲಿಸಿರುತ್ತಾರೆ. ಈ ದಾವೆಯನ್ನು ಸಲ್ಲಿಸಿದ ನಂತರ ಪಾಂಡವಪುರದ ಉಪ ವಿಭಾಗಾಧಿಕಾರಿಗಳು ಆರ್.ಮಿಸ್:134/2021-22 ಪ್ರಕರಣದ ಆದೇಶವನ್ನು ದಿನಾಂಕ:09-11-2023 ರಂದು ಮಾಡಿರುತ್ತಾರೆ. ಅದೇ ರೀತಿ ಪ್ರತಿವಾದಿಯು ಪ್ರತಿವಾದ ಪತ್ರವನ್ನು ದಿನಾಂಕ:25-07-2023 ರಂದು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ. ಆದ ಕಾರಣ ಅಸ್ತಿತ್ವದಲ್ಲಿ ಆರ್.ಮಿಸ್:134/2021-22 ರ ಪ್ರಕರಣದ ಮಾಹಿತಿಯನ್ನು ಪ್ರತಿವಾದ ಪತ್ರದಲ್ಲಿ ಕೈ ತಪ್ಪಿನಿಂದ ನಮೂದಿಸಿರುವುದಿಲ್ಲ. ಆದ ಕಾರಣ ಆರ್.ಮಿಸ್:134/2021-22 ರ ಪ್ರಕರಣದ ಮಾಹಿತಿಗಳನ್ನು ಪ್ರತಿವಾದ ಪತ್ರಕ್ಕೆ ಸೇರ್ಪಡೆ ಮಾಡಬೇಕಾಗಿದೆ. ತಿದ್ದುಪಡಿ ಕೋರಿರುವ ಸಂಗತಿಗಳು ಈ ದಾವೆಗೆ ಅತ್ಯಂತ ಅವಶ್ಯಕವಾದ ವಸ್ತು ವಿಷಯವಾಗಿರುತ್ತದೆ. ಪ್ರತಿವಾದಿಯು ತಿದ್ದುಪಡಿ ಕೋರಿರುವ ಸಂಗತಿಯನ್ನು ಪ್ರತಿವಾದ ಪತ್ರಕ್ಕೆ ಸೇರ್ಪಡೆ/ತಿದ್ದುಪಡಿ ಮಾಡಲು ಅನುಮತಿ ನೀಡಿದರೆ ದಾವೆಯ ಸ್ವರೂಪ ಬದಲಾಗುವುದಿಲ್ಲ. ಹಾಗೂ ವ್ಯಾಜ್ಯ ಕಾರಣವೂ ಸಹ ಬದಲಾಗುವುದಿಲ್ಲ. ಹಾಗೂ ವಾದಿಗೆ ಯಾವುದೇ ತೊಂದರೆಯು ಉಂಟಾಗುವುದಿಲ್ಲ. ಒಂದು ವೇಳೆ ನ್ಯಾಯಾಲಯವು ಪ್ರತಿವಾದ ಪತ್ರವನ್ನು ತಿದ್ದುಪಡಿ ಮಾಡಲು

ಅನುಮತಿ ನೀಡದಿದ್ದರೆ ಪ್ರತಿವಾದಿಗೆ ತುಂಬಲಾರದ ನಷ್ಟ ಮತ್ತು ತೊಂದರೆ ಉಂಟಾಗುತ್ತದೆ. ಮೇಲ್ಕಂಡ ಎಲ್ಲಾ ಕಾರಣಗಳಿಂದ ಪ್ರತಿವಾದಿಯು ಸಲ್ಲಿಸಿರುವ ಅರ್ಜಿಯನ್ನು ಅಂಗೀಕರಿಸಿ ಪ್ರತಿವಾದ ಪತ್ರವನ್ನು ತಿದ್ದುಪಡಿ ಮಾಡಲು ಅನುಮತಿ ನೀಡಬೇಕೆಂದು ನ್ಯಾಯ ಮತ್ತು ಸಮಾನತೆಯ ದೃಷ್ಟಿಯಿಂದ ಕೋರಿಕೊಂಡಿರುತ್ತಾರೆ.

**8.** ವಾದಿಯು ತಮ್ಮ ತಕರಾರನ್ನು ನ್ಯಾಯಾಲಯದಲ್ಲಿ ಸಲ್ಲಿಸಿರುತ್ತಾರೆ. ಪ್ರತಿವಾದಿಯು ಸಲ್ಲಿಸಿರುವ ಅರ್ಜಿಯು ಕಾನೂನಿನ ದೃಷ್ಟಿಯಿಂದ ಮತ್ತು ವಾಸ್ತವೀಕತೆಯ ದೃಷ್ಟಿಯಿಂದ ಊರ್ಜಿತವಾದದಲ್ಲ. ತಕ್ಷಣ ವಜಾ ಆಗ ಬೇಕಾಗಿರುತ್ತದೆ.

ಪ್ರತಿವಾದಿಯು ತಿದ್ದುಪಡಿ ಕೋರಿರುವ ಅಂಶಗಳು ದಾವೆಗೆ ಉಪಯುಕ್ತವಾದಂತಹ ಅಂಶಗಳಾಗಿರುವುದಿಲ್ಲ. ಹಾಗೂ ಯಾವುದೇ ರೀತಿಯ ಹೊಸ ಸಂಗತಿಗಳನ್ನು ಕೋರಿ ಪ್ರತಿವಾದ ಪತ್ರವನ್ನು ತಿದ್ದುಪಡಿ ಮಾಡಿಕೊಳ್ಳಲು ಅರ್ಜಿಯನ್ನು ಸಲ್ಲಿಸಿರುವುದಿಲ್ಲ. ಕೇವಲ ದಾವೆಯನ್ನು ಕಾಲಹರಣ ಮಾಡಲು ಹಾಗೂ ದಾವಾ ಸ್ವತ್ತಿಗೆ ಪ್ರತಿವಾದಿಯ ಪ್ರತಿನಿತ್ಯ ಕಿರುಕುಳ ನೀಡುವ ದುರುದ್ದೇಶದಿಂದ ಹಾಗೂ ಆತ JDLR ನ್ಯಾಯಾಲಯದಲ್ಲಿ ಸಲ್ಲಿಸಿದಂತಹ ರಿವಿಜನ್ ಅರ್ಜಿ 126/25 (ಭೂಮಾಪನ 8/2013). ಅರ್ಜಿಯು ಗುಣಾಂಶಗಳ ಆಧಾರದ ಮೇಲೆ ವಜಾ ಆಗಿದ್ದು, ಸದರಿ ಆದೇಶದ ವಿರುದ್ಧ ಮೇಲ್ಮನವಿ ದಾಖಲಿಸಲು ಪ್ರಯತ್ನಪಡುತ್ತಿದ್ದು, ಸದರಿ ದಾವೆಯ ನಡವಳಿಕೆಯು ಮುಂದುವರೆದ ಪಕ್ಷದಲ್ಲಿ ಕಾನೂನಿನ ಹಿನ್ನಡೆ ಉಂಟಾಗುತ್ತದೆ ಎಂಬ ದುರುದ್ದೇಶದಿಂದ ಅನಾವಶ್ಯಕವಾಗಿ ಪ್ರತಿವಾದ ಪತ್ರ ತಿದ್ದುಪಡಿ ಮಾಡಿಕೊಳ್ಳಲು ಕೋರಿರುವಂತಹ ಅಂಶಗಳು ಸಮಂಜಸವಾದಂತಹ ಸಂಗತಿಗಳಾಗದಿದ್ದರೂ ಸಹ ದಾವೆಯನ್ನು ಕಾಲಹರಣ ಮಾಡಲು ಸಲ್ಲಿಸಿದಂತಹ ಅರ್ಜಿಯಾಗಿರುತ್ತದೆ. ಆದ್ದರಿಂದ ಪ್ರತಿವಾದಿಯು ಸಲ್ಲಿಸಿರುವ ಈ ಅರ್ಜಿಯನ್ನು ಖರ್ಚು ಸಮೇತ ವಜಾ ಮಾಡಬೇಕೆಂದು ಕೋರಿಕೊಂಡಿರುತ್ತಾರೆ.

**9.** ಪ್ರತಿವಾದಿಯ ಅರ್ಜಿ, ಪ್ರಮಾಣಪತ್ರ, ವಾದಿಯ ತಕರಾರು ಮತ್ತು ಹಾಜರುಪಡಿಸಿದ ದಾಖಲಾತಿಗಳನ್ನು ಕೂಲಂಕುಷವಾಗಿ ಪರಿಶೀಲಿಸಿದ ನಂತರ, ಈ ಕೆಳಗಿನ ಅಂಶಗಳು ನ್ಯಾಯಾಲಯದ ಪರಿಗಣನೆಗೆ ಉದ್ಭವವಾಗಿರುತ್ತವೆ.

**10.** ಪ್ರತಿವಾದಿಯು ಖಂಡಿಕೆ-11(ಎ) ಅನ್ನು ತಿದ್ದುಪಡಿ ಮಾಡಿ ಪ್ರತಿವಾದ ಪತ್ರದಲ್ಲಿ ಸೇರಿಸಿಕೊಳ್ಳಲು ಮಧ್ಯಂತರ ಅರ್ಜಿಯನ್ನು ಸಲ್ಲಿಸಿರುತ್ತಾರೆ. ಈಗಾಗಲೇ ಖಂಡಿಕೆ-11 ರಲ್ಲಿ ಆರ್.ಮಿಸ್.ನಂ.194/2012 ರ ಬಗ್ಗೆ ಹೇಳಿಕೊಂಡಿದ್ದು, ಪ್ರಸ್ತುತ ಆರ್.ಮಿಸ್.ನಂ. 134/2021-22 ರ ಮೇಲ್ಮನವಿ ಬಗ್ಗೆ ಹೇಳಿಕೊಂಡಿರುವುದಿಲ್ಲ. ಆ ಕಾರಣ ವಾದಿಯು ಸಲ್ಲಿಸಿರುವ ಸದರಿ ಮೇಲ್ಮನವಿಯ ಅಂಶಗಳನ್ನು ಈ ಲಿಖಿತ ತಕರಾರಿನಲ್ಲಿ ತಿದ್ದುಪಡಿ ಮಾಡಲು ಅವಶ್ಯವಿರುತ್ತದೆ. ಸದರಿ ಅಂಶಗಳನ್ನು ರುಜುವಾತುಪಡಿಸುವ ಹೊಣೆಗಾರಿಕೆ ಪ್ರತಿವಾದಿಯ ಮೇಲೆ ಇರುತ್ತದೆ.

**11.** ಕಡತವನ್ನು ಪರಿಶೀಲಿಸಿದಾಗ, ಪ್ರಸ್ತುತ ದಾವೆಯಲ್ಲಿ ವಿವಾದಾಂಶಗಳು ರಚನೆ ಆಗಿಲ್ಲ ಮತ್ತು ಪ್ರತಿವಾದಿ ಲಿಖಿತ ತಕರಾರನ್ನು ಸಲ್ಲಿಸಿದ ತಕ್ಷಣವೇ ಪ್ರಸ್ತುತ ಅರ್ಜಿಯನ್ನು ಸಲ್ಲಿಸಿದ್ದು, ಈ ಹಂತದಲ್ಲಿ ಅನುಮತಿಸಿದ್ದಲ್ಲಿ ಕಾನೂನಿನ ಯಾವುದೇ ತಡೆವುಂಟಾಗುವುದಿಲ್ಲವೆಂದು ಮತ್ತು ವಾದಿಯು ಸದರಿ ಅಂಶಗಳ ಮೇಲೆ ಹೆಚ್ಚಿನ ವಾದ ಪತ್ರದ ಅಂಶಗಳನ್ನು ಸಲ್ಲಿಸಲು ಕಾಲಾವಕಾಶ ಇರುತ್ತದೆ ಎಂದು ಅಭಿಪ್ರಾಯಿಸುತ್ತಾ ಪ್ರಸ್ತುತ ಮಧ್ಯಂತರ ಅರ್ಜಿಯನ್ನು ಪುರಸ್ಕರಿಸಲು ಪ್ರತಿವಾದಿಯು ಸಾಕಷ್ಟು ಕಾರಣಗಳನ್ನು ತೋರಿಸಲ್ಪಟ್ಟಿದ್ದಾರೆಂದು ಕಂಡು ಬಂದಿರುತ್ತದೆ. ಈಗಾಗಲೇ ಚರ್ಚಿಸಿದಂತೆ ಪ್ರಸ್ತಾವಿತ ತಿದ್ದುಪಡಿಯನ್ನು ಲಿಖಿತ ತಕರಾರಿನಲ್ಲಿ ಸೇರ್ಪಡೆಯಾಗಲು ಪ್ರತಿವಾದಿಯು ತನ್ನ ಪ್ರಮಾಣ ಪತ್ರದಿಂದ ಪುರಾವೆಗೊಳಿಸಿರುತ್ತಾರೆ. ಸದರಿ ಅರ್ಜಿಯನ್ನು ಪುರಸ್ಕರಿಸಿದ್ದಲ್ಲಿ, ವಾದಿಗೆ ಯಾವುದೇ ನಷ್ಟವುಂಟಾಗುವುದಿಲ್ಲ ಮತ್ತು ದಾವೆಯ ಸ್ವರೂಪ ಮತ್ತು ವ್ಯಾಜ್ಯ ಕಾರಣ ಬದಲಾಗುವುದಿಲ್ಲವೆಂದು ನ್ಯಾಯಾಲಯದ ಅಭಿಪ್ರಾಯವಾಗಿದೆ. ಆ ಕಾರಣ ಮಧ್ಯಂತರ ಅರ್ಜಿಯು ಪುರಸ್ಕರಿಸಲು ಅರ್ಹವಾಗಿದೆ ಎಂದು ಈ ನ್ಯಾಯಾಲಯವೂ ಅಭಿಪ್ರಾಯಿಸುತ್ತಾ ಅಂಶ-**1** ನ್ನು ಸಕಾರಾತ್ಮಕವಾಗಿ ಉತ್ತರಿಸಲಾಗಿದೆ.

**12.** **<u>ಅಂಶ-2</u>ಃ** ಅಂಶ-1 ರಲ್ಲಿ ವಿವರಿಸಿದ ಕಾರಣಗಳ ಸಹಿತ ಈ ಕೆಳಗಿನಂತೆಃ

**<u>ಆದೇಶ</u>**

ಪ್ರತಿವಾದಿಯು, ಸಿವಿಲ್ ಪ್ರಕ್ರಿಯಾ ಸಂಹಿತೆ, ಕ್ರಮಾದೇಶ-6
ನಿಯಮ-17 ಸಹವಾಚಕ ಕಲಂ.151 ರ ಅಡಿಯಲ್ಲಿ ಸಲ್ಲಿಸಿರುವ

ಮಧ್ಯಂತರ ಅರ್ಜಿ-2 ಅನ್ನು ರೂ.200/- ಖರ್ಚು ಸಹಿತ ಪುರಸ್ಕರಿಸಲಾಗಿದೆ.

ಪ್ರತಿವಾದಿಯು ಉದ್ದೇಶಿತ ಖಂಡಿಕೆಯನ್ನು ತಮ್ಮ ಪ್ರತಿವಾದ ಪತ್ರದಲ್ಲಿ ಸೇರಿಸಿಕೊಳ್ಳಲು ಅನುಮತಿಸಲಾಗಿದೆ.

ಪ್ರತಿವಾದ ಪತ್ರವನ್ನು ತಿದ್ದುಪಡಿ ಮಾಡಲು ಮತ್ತು ತಿದ್ದುಪಡಿ ಪ್ರತಿವಾದ ಪತ್ರವನ್ನು ಸಲ್ಲಿಸಲು ಆದೇಶಿಸಲಾಗಿದೆ.

**(ಶೀಘ್ರಲಿಪಿಗಾರಳಿಗೆ ಉಕ್ತಲೇಖನ ನೀಡಿದ್ದು, ಸದರಿಯವರು ಬೆರಳಚ್ಚು ಮಾಡಿದ ನಂತರ ಓದಿ ಪರಿಶೀಲಿಸಿ, ಪರಿಷ್ಕರಿಸಿ ತೆರೆದ ನ್ಯಾಯಾಲಯದಲ್ಲಿ ಇಂದು ದಿನಾಂಕ 25 ನೇ ಸೆಪ್ಟೆಂಬರ್ - 2025 ರಂದು ಸದರಿ ಆದೇಶವನ್ನು ಘೋಷಿಸಲಾಗಿದೆ.)**

**(ಪಾರ್ವತಮ್ಮ.ಬಿ)**
**C/C 1 ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ ನ್ಯಾಯಾಲಯ, ಪಾಂಡವಪುರ.**